**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *23.07.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಜೆ.ಪಿ.ಎಸ್ ರವರಿಂದಃ**

. ನನ್ನ ಹೆಂಡತಿ ಕೆರೆ ತೋಣ್ಣುರು ಗ್ರಾಮದಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ತಿಂಗಳಿಗೆ 12,000/- ಸಂಬಳ ಬರುತ್ತಿತ್ತು. ನಮ್ಮ ಕುಟುಂಬದ ಖರ್ಚು ವೆಚ್ಚಗಳನ್ನು ನನ್ನ ಹೆಂಡತಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಜನವರಿ 2023 ರಲ್ಲಿ ನನಗೆ ಆರೋಪಿತನ ಪರಿಚಯವಾಗಿತ್ತು. ಆರೋಪಿತ ನಮ್ಮ ಮನೆಗೆ ಬಂದಾಗ ನೀನು ಯಾರು ಎಂದು ಕೇಳಿದಾಗ ನಾನು ಮಮತಾ ಇವರ ಸ್ನೇಹಿತ ಎಂದು ಹೇಳಿದಾಗ ಅವರ ಪರಿಚಯವಾಗಿತ್ತು. ಜನವರಿ ***2023*** ಕಿಂತ ಮೊದಲು ಎಷ್ಟು ದಿನಗಳ ಹಿಂದಿನಿಂದ ನನ್ನ ಹೆಂಡತಿಗೂ ಮತ್ತು ಆರೋಪಿತನಿಗೂ ಸ್ನೇಹ ಇತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿತ ಮತ್ತು ನನ್ನ ಹೆಂಡತಿ ಜನವರಿ ***2023*** ಕಿಂತ ಮೊದಲು ವ್ಯವಹಾರ ಮಾಡಿದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ. ***2023*** ರ ಜನವರಿಯಲ್ಲಿ ಆರೋಪಿತ ನನ್ನ ಹೆಂಡತಿಯ ಜೊತೆಯಲ್ಲಿ ಬೇಕರಿ ಮಾಡುತ್ತೇನೆ ಎಂದು ಹೇಳುವ ಸಲುವಾಗಿ ನಮ್ಮ ಮನೆಗೆ ಬಂದಿದ್ದ. ಅದಕ್ಕೂ ಮೊದಲು ಆರೋಪಿತ ಏನು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಗೋವಾದಲ್ಲಿ ಒಂದು ಬೇಕರಿ ನಡೆಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿತ ಗೋವಾದಲ್ಲಿನ ಬೇಕರಿಯನ್ನು ಮಾರಾಟ ಮಾಡಿ ಸಿದ್ದಲಿಂಗಪುರದಲ್ಲಿ ಬೇಕರಿ ಪ್ರಾರಂಭಿಸಿದ್ದ ಎಂದರೆ ಗೊತ್ತಿಲ್ಲ. ಆ ಬೇಕರಿ ಮಾಡಿದಾಗ ನನಗೂ ಮತ್ತು ನನ್ನ ಹೆಂಡತಿಗೂ ಆರೋಪಿತ ಪರಿಚಯವಾಗಿದ್ದ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಆರೋಪಿತನ ಬೇಕರಿಗೆ ಆಗಾಗ ಹೊಗುತ್ತಿದ್ದೆವು ಎಂದರೆ ಸರಿಯಲ್ಲ.

*2.* ನನ್ನ ಹೆಂಡತಿ ಬೆಳಗ್ಗೆ *9.30* ರಿಂದ ಸಂಜೆ *4* ರವರಿಗೆ ಅಂಗನವಾಡಿ ಕೆಲಸಕ್ಕೆ ಹೊಗುತ್ತಿದ್ದರು. ದಿಃ*24.05.2023* ರಂದು ನಾನು ನಮ್ಮ ಗ್ರಾಮದ ನಮ್ಮ ಮನೆಯಲ್ಲೇ ಇದ್ದೆ. ಆ ದಿನ ಬೆಳಗ್ಗೆ *10* ರಿಂದ ಮದ್ಯಾಹ್ನ *4* ರವರೆಗೆ ನಾನು ಮನೆಯಲ್ಲೇ ಇದ್ದೆ. ಆ ದಿನ ಬೇಸಿಗೆ ರಜೆ ಇದುದ್ದರಿಂದ ನನ್ನ ಹೆಂಡತಿ ಕೆಲಸಕ್ಕೆ ಹೋಗಿರಲಿಲ್ಲ. ನನ್ನ ಹೆಂಡತಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅಂಗನವಾಡಿ ಕೆಲಸ ಮಾಡುತ್ತಿದ್ದರು ಅದನ್ನು ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲ. ದಿಃ*24.05.2023* ರಂದು ಬೆಳಗ್ಗೆ *10.30* ರವರೆಗೆ ನನ್ನ ಹೆಂಡತಿ ನಮ್ಮ ಮನೆಯಲ್ಲೇ ಇದ್ದರು. *10.30* ರಿಂದ *10.45* ಕ್ಕೆ ಪಾಂಡವಪುರಕ್ಕೆ ಹೋಗುವುದಾಗಿ ಮನೆಯಿಂದ ಹೊರಟ್ಟಿದ್ದರು. ನಂತರ ಎಲ್ಲಿಗೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಮದ್ಯಾಹ್ನ *4* ಗಂಟೆಗೆ ಪವಿತ್ರರಾಜ್ ಇವರು ನಿನ್ನ ಹೆಂಡತಿಗೆ ಸೀರಿಯಸ್ ಎಂದು ಹೇಳಿದ್ದರಿಂದ ನಾನು ಮೈಸೂರಿಗೆ ಬಂದಿದ್ದೆ. ಆ ಪವಿತ್ರ ರಾಜ್ ಇವರ ಪೊನ್ ನಂಬರ್ ನೆನಪಿಲ್ಲ ಆದರೆ ಅದು ನನ್ನ ಬಳಿ ಇದೆ. ದೂರಿನಲ್ಲಿ ಪವಿತ್ರ ರಾಜ್ ಇವರ ಪೊನ್ ನಂಬರ್ ಬರೆದಿಲ್ಲ.

*3.* ಸಂಜೆ *5* ಗಂಟೆಗೆ ಸಿದ್ದಲಿಂಗಪುರ ಬೇಕರಿ ಬಳಿ ಹೋಗಿದ್ದೆ. ಆ ಕಾಲಕ್ಕೆ ಆ ಬೇಕರಿ ಬಳಿ ಆ ಊರಿನ ಗ್ರಾಮಸ್ಥರು ಮತ್ತು ಪೋಲೀಸರು ಇದ್ದರು. ಆ ಕಾಲಕ್ಕೆ ನನಗೆ ಆ ಗ್ರಾಮಸ್ಥರ ಪರಿಚಯ ಇರಲಿಲ್ಲ. ಆ ದಿನ ಬೇಕರಿಯಿಂದ ಕೆ.ಆರ್.ಆಸ್ಪತ್ರೆಗೆ ಹೋಗಿದ್ದೆ. ಬೇಕರಿ ಬಳಿ ಇದ್ದ ಜನರನ್ನು ವಿಚಾರಿಸಿದಾಗ ಅವರು ಮೋಹನ್ ಕುಮಾರ್ ರಾಡಿನಿಂದ ಹೊಡೆದು ಓಡಿಹೋಗಿದ್ದಾನೆ ಎಂದು ಹೇಳಿದ್ದರು. ಆದರೆ ಆ ಗ್ರಾಮಸ್ಥರ ಹೆಸರು ಗೊತ್ತಿಲ್ಲ. ದೂರಿನಲ್ಲಿ ಆ ಗ್ರಾಮಸ್ಥರ ಹೆಸರು ನಮೂದು ಇಲ್ಲ ಮತ್ತು ಗ್ರಾಮಸ್ಥರು ಹೇಳಿದ್ದಾರೆ ಎಂದು ನಮೂದು ಇಲ್ಲ. ಆ ಕಾಲಕ್ಕೆ ಅವರ ಹೆಸರು ನಮೂದಿಸಲು ಯಾವ ತೊಂದರೆ ಇರಲಿಲ್ಲ ಆದರೆ ನನ್ನ

ಹೆಂಡತಿಯನ್ನು ನೋಡುವ ಅವಸರದಲ್ಲಿ ಇದುದ್ದರಿಂದ ನಮೂದಿಸಿರಲಿಲ್ಲ. ಕೆ.ಆರ್.ಆಸ್ಪತ್ರೆ ಶವಾಗಾರದ ಬಳಿ ಹೋದಾಗ ಅಲ್ಲಿ ಪೋಲೀಸರು ಇದ್ದರು ಬೇರೆ ಯಾರು ಇರಲಿಲ್ಲ. ಶವಾಗಾರದ ಬಳಿ ಆರೋಪಿತ ಮೊಹನ್ ಕುಮಾರ ಮತ್ತು ಗ್ರಾಮಸ್ಥರು ಇದ್ದರು ಎಂದರೆ ಸರಿಯಲ್ಲ. ಶವವನ್ನು ನೋಡಿದ ಬಳಿಕ ಮೇಟಗಳ್ಳಿ ಪೋ.ಠಾಣೆಗೆ ಹೋಗಿದ್ದೆ. ನಾನು, ಕುಮಾರ, ಕವಿತಾ, ಗೋಪಾಲ, ನಾಗೇಗೌಡ ಮೇಟಗಳ್ಳಿ ಪೋ.ಠಾಣೆಗೆ ಹೋಗಿದ್ದೆವು. ಆ ಕಾಲಕ್ಕೆ ಬೇರೆ ಯಾರು ಇರಲಿಲ್ಲ ನಮ್ಮನ್ನು ಪೋಲೀಸರೇ ಶವಾಗಾರದಿಂದ ಪೋ.ಠಾಣೆಗೆ ಕರೆದುಕೊಂಡು ಹೋಗಿದ್ದರು.

*4.* ಮೋಹನ್ ಕುಮಾರ್ ಗೋವಾ ಬೇಕರಿ ಮಾರಾಟ ಮಾಡಿ ತಂದಿದ್ದ ಹಣವನ್ನು ನಾನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಮೋಹನ್ ಕುಮಾರ್ ಮತ್ತು ನನ್ನ ಮದ್ಯೆ ಸಂಬಂದ ಚೆನ್ನಾಗಿತ್ತು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಮ್ಮ ಕುಟುಂಬ ಮತ್ತು ಮೋಹನ್ ಕುಮಾರ್ ಕುಟುಬಂದ ನಡುವೆ ಸಂಬಂದ ಚೆನ್ನಾಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಆರ್ಥಿಕವಾಗಿ ನಷ್ಟ ಅನುಭವಿಸಿದ್ದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಆರೋಪಿತ ನನಗೆ ಹಣ ಕೊಟ್ಟಿದ್ದ ಮತ್ತು ಆರೋಪಿತನ ಚಿನ್ನವನ್ನು ನನ್ನ ಮತ್ತು ನನ್ನ ಹೆಂಡತಿ ಹೆಸರಿನಲ್ಲಿ ಅಡ ಇಟ್ಟಿದ್ದ ಎಂದರೆ ಸರಿಯಲ್ಲ. ಆರೋಪಿತ ನನ್ನನ್ನು ಹಲವಾರು ಬಾರಿ ಹಣ ವಾಪಸ್ಸು ಕೊಡುವಂತೆ ಕೇಳಿದ್ದ ಎಂದರೆ ಸರಿಯಲ್ಲ. ನನ್ನ ಹೆಂಡತಿಯೇ ಬೇಕರಿ ಬಳಿ ಹೋದಾಗ ಅವರೇ ಸ್ವತಃ ಬಿದ್ದು ಏಟಾಗಿತ್ತು ಎಂದರೆ ಸರಿಯಲ್ಲ. ಅವರೇ ಬಿದ್ದು ಏಟು ಮಾಡಿಕೊಂಡಿದ್ದರು ಸಹ ಆರೋಪಿತನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಆರೋಪಿತನೊಂದಿಗೆ ಬಿದ್ದು ಗಾಯಗೊಂಡಿದ್ದಾಳೆ ಎಂದು ದೂರು ಕೊಡಲು ಮೇಟಗಳ್ಳಿ ಪೋ.ಠಾಣೆಗೆ ಹೋಗಿದ್ದೆ ಎಂದರೆ

ಸರಿಯಲ್ಲ. ಆ ಕಾಲಕ್ಕೆ ನಾನು ಮತ್ತು ನನ್ನ ಸಂಬಂಧಿಕರು ನಮ್ಮ ಹಣವನ್ನು ಮನ್ನಾ ಮಾಡಿದರೆ ನಿಜ ವಿಷಯದಂತೆ ದೂರು ಕೊಡುತ್ತೇವೆ ಇಲ್ಲವಾದಲ್ಲಿ ನಿನ್ನ ವಿರುದ್ಧ ದೂರು ಕೊಡುತ್ತೇವೆ ಎಂದು ಆರೋಪಿತನಿಗೆ ಬೆದರಿಕೆ ಹಾಕಿದ್ದೇವು ಎಂದರೆ ಸರಿಯಲ್ಲ. ಆರೋಪಿತರು ಸಾಲ ಮನ್ನಾ ಮಾಡಲು ಒಪ್ಪದೇ ಇದ್ದಾಗ ಆರೋಪಿತನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

*5.* ದೂರನ್ನು ನಾನೇ ಬರೆದಿದ್ದೇನೆ. ಆರೋಪಿತ ಮತ್ತು ನಟರಾಜ ಸೇರಿಕೊಂಡು ನನ್ನ ಹೆಂಡತಿಯ ಪೊಟೋಗಳನ್ನು ಫೇಸ್ ಬುಕ್ ನಲ್ಲಿ ಅಪ್ ಲೊಡ್ ಮಾಡುತ್ತೇವೆ ಎಂದು ಹೇಳಿದ್ದರಿಂದ ಆ ಬಗ್ಗೆ ಪಾಂಡವಪುರ ಪೋ.ಠಾಣೆಯಲ್ಲಿ ದೂರು ದಾಖಲಾಗಿತ್ತು. ಆ ಪ್ರಕರಣದ ದಾಖಲಾತಿಯನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ಆ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ಆ ರೀತಿ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಯಾವ ರೀತಿಯ ಪೊಟೋಗಳು ಎಂದು ನನಗೆ ಗೊತ್ತಿಲ್ಲ ಆ ಬಗ್ಗೆ ನನ್ನ ಹೆಂಡತಿಗೆ ಗೊತ್ತಿತ್ತು. *10-12* ವರ್ಷಗಳಿಂದ ನನ್ನ ಮತ್ತು ನನ್ನ ಹೆಂಡತಿ ನಡುವೆ ಸಂಬಂದ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿಯನ್ನು ಅನುಮಾನಪಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಸಾವಿಗೂ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ಕೊಡುವ ಸಲುವಾಗಿ ಮತ್ತು ಆರೋಪಿತನಿಗೆ ಹಣ ಕೊಡಬೇಕಾಗುತ್ತದೆ ಎನ್ನುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**